ತಾರೀಖು 12ನೆ ಏಪ್ರಿಲ್ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—1904ನೆ ಇಸವಿ ಜುಲೈ ಗುರ್ತಿ ಲಾಗಾಯತು 1905ನೆ ಇಸವಿ ಜೂನ್ ಆಖ್ಯೆರು ವರಿಗೆ (1 ವರುಸಕ್ಕೆ) ಕಡೂರು ಡಿಸ್ಟ್ರಿಕ್ಟಿನ ಇದ್ದಾಡಿ ಕಾಣಿಕಿರುವ ಟೋಲು ಗೇಟುಗಳಲ್ಲಿ ಟೋಲ್ ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು ಡೆಪ್ಯುಟಿ ಕಮಿಷನರ್ ಯಾ ಅವರಿಂದ ಈ ಕೆಲಸಕ್ಕೆ ನೇಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರ್ ಅವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ :—

ನಂಬರು.	ಟೋಲು ಗೇಟು ಹೆಸರು.	ಹರಾಜು ತಾರೀಖು.	ಹರಾಜು ನಡಿಯುವ ಸ್ಥಳ.
1	ಬಾಳೆಹೊನ್ನೂರು (ಭದ್ರಾನದಿ ಸೇತುವೆ) ...	23ನೆ ಮೇ 1904.	ಬಾಳೆಹೊನ್ನೂರು ಮುಸಾಫರ್ ಬಂಗ್ಲೆಯಲ್ಲಿ.
2	ತಡಸ (ಭದ್ರಾನದಿ ಸೇತುವೆ) ...	23ನೆ ಡಿಟೋ	ಯಡೆಹಳ್ಳಿ ಸಬ್ ತಾಲ್ಲೂಕು ಕಚೇರಿಯಲ್ಲಿ.
3	ಹರಿಹರಪ್ರ (ತುಂಗಾನದಿ ಸೇತುವೆ) ..	25ನೆ ಡಿಟೋ	ಕೊಪ್ಪದ ತಾಲ್ಲೂಕು ಕಚೇರಿಯಲ್ಲಿ.

ಇತರ ತಪಶೀಲುಗಳನ್ನು 1904ನೆ ಇಸವಿ ಏಪ್ರಿಲ್ ತಿಂಗಳು 7ನೆ ತಾರೀಖಿನ ಗೆಜೆಟ್ಟಿನ 218ನೆ ಪೇಜಿನಲ್ಲಿ ಘೋಷಿಸಿ ಮಾಡಿರುವ 1904ನೆ ಇಸವಿ ಮಾರ್ಚಿ 31ನೆ ಮಂಗಳವಿನ ಪುರು ಇಸ್ತಿಹಾರ್ನಾಮೆಯ ಮೂಲಕ ತಿಳಿದುಕೊಳ್ಳತಕ್ಕದ್ದು.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ಪೇಜು 217. IIನೆ ಭಾಗ. 3ನೆ ಪ್ಯಾರಾದಲ್ಲಿ.

(1)ನೆ ಕಂಗಿ ಯ ಲ್ಲಿ.—"ಎಂಟು ಖಿಸ್ತುಗಳಾಗಿ" ಎನ್ನುವದಕ್ಕೆ ಬದಲಾಗಿ "ಹದಿನಾರು ಖಿಸ್ತುಗಳಾಗಿ" ಎಂತಲೂ;

7ನೆ ಕಂಡ್ಯಾಯಲ್ಲಿ.—"9, 10, 11 ಮತ್ತು 12ನೆ ಖಿಸ್ತುಗಾಗಿ" ಎನ್ನುವದಕ್ಕೆ ಬದಲಾಗಿ "ಬಾಕಿ ಖಿಸ್ತುಗಳಿಗೆ" ಎಂತಲೂ; ಓದುವದು.

ಎ. ವೇದಾಂತದೇಸಿಗಂ ಅಯ್ಯಂಗಾರ್,
ಫಾರ್ ಡೆಪ್ಯೂಟಿ ಕಮ್ಮಿಷನರ್.

ಮೈಸೂರು ಸಿಟಿ ಮ್ಯುನಿಸಿಪಾಲಿಟಿ.

ತಾರೀಖು 23ನೆ ಮಾಹೆ ಏಪ್ರಿಲ್ 1904.

ಸ್ ಈ 1904ನೆ ಇಸವಿ ಜುಲೈ ಮಾಹೆ ತಾರೀಖು 1ರ ಲಾಗಾಯಿತು 1905ನೆ ಇಸವಿ ಜೂನ್ ಮಾಹೆ ತಾರೀಖು 30ರ ವರಿಗೆ ಈ ಕೆಳಗಿನ ಎ. ಷೆಡ್ಯೂಲಿನಲ್ಲಿ ನಮೂದಿಸುವ ಮೈಸೂರು ಸಿಟಿಗೆ ಸೇರಿದ ತಮಾಂ ಟೋಲು ಗೇಟುಗಳ ಮುಖಾಂತ್ರ ಸಿಟಿ ವಳಕ್ಕೆ ಬರುವ ಗಾಡಿಗಳು, ಜಾನವರುಗಳು ಪಗ್ಗೆರೆಗಳ ಮೇಲೆ ಬಿ. ಷೆಡ್ಯೂಲಿನಲ್ಲಿ ನಮೂದಾಗುವ ದರದಂತೆ, ಸಿಟಿ ಮ್ಯುನಿಸಿಪಲ್ ರೆಗ್ಯುಲೇಷನ್ ಈ 49 ಮತ್ತು 51ನೆ ಸೆಕ್ಷನ್‌ಗಳಲ್ಲಿ ನಮೂದಿರುವ ಪರತ್ತುಗಳಿಗೆ ವಳಪಡಿಸಿ ಪ್ರತಿಬಂದು ಟೋಲುಗೇಟುಲ್ಲಿಯಾಗಲಿ ಅಥವಾ ದರೋಬಸ್ತು ಗೇಟುಗಳಲ್ಲಿದ್ದಾಗಲಿ, ಟೋಲು ವಸೂಲ್ಮಾಡುವ ಬಾಬನ್ನು 1904ನೆ ಇಸವಿ ಮೇ ಮಾಹೆ ತಾರೀಖು 14ನೆ ಮಧ್ಯಾನ್ನ 1 ಘಂಟೆಯ ಲಾಗಾಯಿತು ರಂಗಾಚಾರ್ಲು ಯವರ ಮುಕೋದ್ದುಲ್ ಹಾಲಿನಲ್ಲಿ ಪ್ರೆಸಿಡೆಂಟರವರಿಂದ ಯಾ ಅವರಿಂದ ಸ್ಪೆಷಲ್ಲಾಗಿ ನೇಮಿಸಲ್ಪಟ್ಟ ಇತರ ಆಫಿಸರವರಿಂದ, ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಬಾಬನ್ನು ಪಡೆಯುವ ಕಂಟ್ರಾಕ್ಟರು ಬಿ. ಷೆಡ್ಯೂಲಿನಲ್ಲಿ ನಮೂದಾಗುವ ರೇಟಿನಂತೆಯೇ ಗೇಟುಗಳ ಮುಖಾಂತರ ಸಿಟಿ ವಳಕ್ಕೆ ಒರುವ ಗಾಡಿ ಪಗ್ಗೆರೆಗಳ ಮೇಲೆ ಟೋಲು ವಸೂಲ್ಮಾಡತಕ್ಕದ್ದು. ಹಚ್ಚು ರೇಟನ್ನು ವಸೂಲ್ಮಾಡಕೂಡದು ಶಿವಾಯಿ ಪ್ರೆಸಿಡೆಂಟರವರಿಂದ ವಿಧಾಯಕ ಮಾಡಲ್ಪಡುವ ಫಾರಂನಲ್ಲಿ ಕ್ರಮವಾಗಿ ಸಾಲು ಮಾಹೆ ತಾರೀಖು ನಿಕಿ ಟೋಲು ವಾವತಿ ಮಾಡತಕ್ಕ ಆಸಾಮಿಗಳಿಗೆ ರಸೀದಿ ಕೊಡಬೇಕು.

3. ಎಲ್ಲಾ ದರಕ್ಕಿಂತ ಜಾಸ್ತಿ ದರವನ್ನೇ ಆಗಲಿ ಅಥವಾ ಮತ್ಯಾವ ದರವನ್ನೇ ಆಗಲಿ ಮಂಜೂರು ಮಾಡುವ ಅಧಿಕಾರವು ಪ್ರೆಸಿಡೆಂಟರವರಲ್ಲಿರುತ್ತದೆ.

4. ಪ್ರತಿ ತಿಂಗಳು 10ನೆ ತಾರೀಖುವಳಗಾಗಿ ಹಿಂದಣ ಮಾಹೆಯ ಖಿಸ್ತು ಮೊಬಲಗನ್ನು ವಾವತಿ ಮಾಡಬೇಕು. ಹರಾಜು ಆಖ್ಯೆರಾದ ಕೂಡ್ಲೆ ಬಾಬನ್ನು ಪಡೆಯತಕ್ಕ ಕಂಟ್ರಾಕ್ಟರು ಎರಡು ಮಾಹೆಗಳ ಖಿಸ್ತಿಗೆ ಸಮಾನವಾದ ಮೊಬಲಗನ್ನು ಡಿಪಾಜಿಟ್ ಬಗ್ಗೆ ಹಾಜರ್ಮಾಡಬೇಕು. ಪರತ್ತುಗಳ ಪ್ರಕಾರ ಕಂಟ್ರಾಕ್ಟು ನಡೆದರೆ, ಡಿಪಾಜಿಟ್ಟಲ್ಲಿರುವ ಮೊಬಲಗನ್ನು ಆಖ್ಯೆರು ಎರಡು ಮಾಹೆಗಳ ಖಿಸ್ತು ಬಗ್ಗೆ ಜಮೆಗೆ ತೆಗದುಕೊಳ್ಳುತ್ತೆ.

5. ಹರಾಜು ಆಖ್ಯೆರಾದ ಕೂಡ್ಲೆ ಡಿಪಾಜಿಟ್ ಬಗ್ಗೆ ಮೊಬಲಗನ್ನು ಹಾಜರ್ಮಾಡದೆ ಇದ್ದರೆ, ಖರ್ಚಿಗು ಮತ್ತು ಲುಕ್ಸಾನಿಗೂ, ಅವ್ವಲ್ ಕಂಟ್ರಾಕ್ಟುದಾರನನ್ನು ಗುರಿಪಡಿಸಿ ಪುನಹ ಹರಾಜು ಮಾಡಿಸುತ್ತೆ. ಖಿಸ್ತು ಮೊಬಲಗನ್ನು ವಾಯಿದೆ ವಳಗೆ ಹಾಜರ್ಮಾಡಲ್ಲು ತಪ್ಪಿದರೆ, ಡಿಪಾಜಿಟ್ ಮೊಬಲಗನ್ನು ದಂಡವಾಗಿ ತೆಗದುಕೊಂಡು ಬಾಬನ್ನು ಮುಸರಾ ಹರಾಜು ಮಾಡಿಸಿ ಅದರಲ್ಲಿ ನಷ್ಟವೇನಾದರೂ ಆದಲ್ಲಿ ಆ ನಷ್ಟಕ್ಕೆ ಅವ್ವಲ್ ದರಖಾಸ್ತು ದಾರನನ್ನು ಗುರಿಪಡಿಸುತ್ತೆ. ಎರಡನೆ ಹರಾಜಿನಲ್ಲಿ ನಫೆ ಬಂದಲ್ಲಿ, ಮೊದಲು ದರಖಾಸ್ತು ದಾರನಿಗೆ ಸದರಿ ನಫೆಗೆ ಹಕ್ಕು ಇರುವದಿಲ್ಲ.

6. ಪ್ರತಿ ಒಬ್ಬ ಕಂಟ್ರಾಕ್ಟರು ರೋಜೀನಾ ಟೋಲುಗೇಟುಗಳ ಮುಖಾಂತ್ರ ಪ್ರವೇಶಮಾಡುವ ತರಹಾವಾರಿ ಗಾಡಿ ಯಾ ಜಾನವರುಗಳು ಇವುಗಳ ಮೇಲೆ ವಸೂಲಾದ ಟೋಲ್ ಯಾನೆ ಸುಂಕ ಇವುಗಳ ತಪಶೀಲು ತೋರಿಸುವ ಲೆಖ್ಖವನ್ನು ಪೈಸಿಡೆಂಟರವರು ವಿಧಾಯಕ ಮಾಡುವ ನಮೂನೆಯಲ್ಲಿಟ್ಟು, ಅಂಥಾ ಲೆಖ್ಖವನ್ನು ಕಂಟ್ರಾಕ್ಟರು ಪ್ರತಿ ಮಾಹೆಯಲ್ಲಿಯೂ, ಪೈಸಿಡೆಂಟರವರ ಇನ್ಸ್ಪೆಕ್ಷನ್ ಬಗ್ಗೆ ಹಾಜರ್ಮಾಡಬೇಕು. ಶಿವಾಯಿ ಸಾಯರು ಅಥವಾ ಮ್ಯುನಿಸಿಪಲ್ ಉದ್ಯೋಗಸ್ಥರು ಅಪೇಕ್ಷಿಸಿದಾಗ ಅಂಥಾ ಲೆಖ್ಖಗಳನ್ನು ಅವರ ಇನ್ಸ್ಪೆಕ್ಷನ್ ಬಗ್ಗೆ ಹಾಜರ್ಮಾಡುವದಕ್ಕೂ ಬದ್ಧನಾಗಿರತಕ್ಕದ್ದು.

7. ಪ್ರತಿ ಒಬ್ಬ ಕಂಟ್ರಾಕ್ಟರು ಟೋಲು ಗೇಟುಗಳ ಮುಖಾಂತರ ಬರತಕ್ಕ ಗಾಡಿ ಯಾ ಜಾನವರುಗಳ ತಪಶೀಲು ಲೆಖ್ಖವನ್ನು 6ನೆ ಕಲಂನಲ್ಲಿ ನಮೂದಿಸಿರುವಂತೆ, ಇಡತಕ್ಕ ಬಗ್ಗೆ ಆಯಾಯು ಕಂಟ್ರಾಕ್ಟುದಾರನ ಸ್ವಂತ ಖರ್ಚಿನಿಂದ ಪ್ರತಿವಂದು ಟೋಲುಗೇಟಿನಲ್ಲಿಯೂ, ಒಬ್ಬೊಬ್ಬ ಮುತ್ಸದ್ದಿಯನ್ನಿಡುವದಕ್ಕೆ ಬದ್ಧನಾಗಿರತಕ್ಕದ್ದು.

8. ಹಾಲಿ ಇರುವ ಟೋಲುಗೇಟುಗಳನ್ನು ಮತ್ತು ಮನೆಗಳನ್ನು ಕಂಟ್ರಾಕ್ಟರು ಬಳ್ಳೀ ಸ್ಥಿತಿಯಲ್ಲಿಟ್ಟುಕೊಂಡು, ಅವುಗಳನ್ನು ಉಪಯೋಗ ಮಾಡಿಕೊಳ್ಳಬಹುದು.

9. ಈ ಮೇಲ್ಕಂಡ ಪರತ್ತುಗಳಿಗೆ ಬಳಪಟ್ಟು ಕಂಟ್ರಾಕ್ಟು ಬಾಬನ್ನು ಸಲೀಸು ನಡೆಸಿಕೊಂಡು ಹೋಗತಕ್ಕ ವಿಚಾರದಲ್ಲಿ ಕಂಟ್ರಾಕ್ಟರು ಪೈಸಿಡೆಂಟರವರಿಂದ ವಿಧಾಯಕವಾದ ನಮೂನೆಯಲ್ಲಿ ಭಾಷಾ ಕಾಗದದಲ್ಲಿ ರೂಲ್ಸ್ ಪ್ರಕಾರ ಮುಚ್ಚಳಿಕೆ ಬರೆದು ಕೊಡಬೇಕು.

10 ಈ ಕೆಳಗೆ ನಮೂದಾಗುವವುಗಳ ಮೇಲೆ ಕಂಟ್ರಾಕ್ಟರು ಟೋಲನ್ನು ವಸೂಲ್ಮಾಡಕೂಡದು.

(1) ಮ್ಯುನಿಸಿಪಾಲಿಟಿಗೆ ತೆರಿಗೆ ಫಾವತಿಮಾಡಿ ನಂಬರು ಹಾಕಿಸಿಕೊಂಡಿರತಕ್ಕ ಗಾಡಿಗಳು ಅಥವಾ ಕ್ಯಾರೇಜುಗಳು ಮ್ಯುನಿಸಿಪಾಲಿಟಿಯಿಂದ ಪಡೆದಿರತಕ್ಕ ಪ್ಯಾಸುಗಳನ್ನು ಹಾಜರ್ಮಾಡುವ ಗಾಡಿಗಳು ಅಥವಾ ಜಾನವರುಗಳು ಮತ್ತು ಗವರ್ನಮೆಂಟ್ ಯಾ ಮ್ಯುನಿಸಿಪಲ್ ಕಮಿಷರ್ಗೆ ಸೇದ ಅಥವಾ ಸಾಮಾನು ವಗೈರೆ ಸಾಗಿಸುವದಕ್ಕಾಗಿ ಮೊಕರರ್ರಾಡಲ್ಪಟ್ಟ ಕ್ಯಾರೇಜುಗಳು, ಗಾಡಿಗಳು ಮತ್ತು ಜಾನವರುಗಳ ಮೇಲೆ ಮತ್ತು ಒಂದು ದಿವಸದಲ್ಲಿ 24 ಘಂಟೆದು ಕಾಲದೊಳಗಾಗಿ ಅಂದರೆ ಒಂದು ಮಧ್ಯರಾತ್ರಿಯಿಂದ ಇನ್ನೊಂದು ಮಧ್ಯರಾತ್ರಿಯವರಿಗೂ, ಯಾವ ಕ್ಯಾರೇಜುಗಾಡಿ ಅಥವಾ ಜಾನವರುಗಳ ಮೇಲೆಯೇ ಆಗಲಿ, "ಒಂದುಸಾರಿಗಿಂತಲೂ ಹೆಚ್ಚಾಗಿ ಟೋಲು ವಸೂಲ್ಮಾಡಕೂಡದು.

(2) ಟೋಲು ಮುಖಾಂತರ ಬರತಕ್ಕ ಸೈನಿಕರ ವಾಹನಕ್ಕಾಗಿ ಅಥವಾ ಅಂಥಾ ಸೈನಿಕರ ಸಾಮಾನು ವಗೈರೆ ಸಾಗಿಸತಕ್ಕ ಬಗ್ಗೆ ಉಪಯೋಗಿಸುವ ಗಾಡಿ ಅಥವಾ ಜಾನವರುಗಳ ಮೇಲೆ ಮಿಲಿಟೆರಿ ಅಥವಾ ಗವರ್ಮೆಂಟ್ ಸ್ಟೋರಿಗೆ ಸಾಗಿಸಲ್ಪಡುವ ಸಾಮಗ್ರಿಗಳು ಇರತಕ್ಕ ಗಾಡಿ ಅಥವಾ ಜಾನವರುಗಳ ಮೇಲೆ ಸರ್ಕಾರಿ ಡ್ಯೂಟಿಯ ಮೇಲೆ ಬರತಕ್ಕ ಪೊಲೀಸು ಆಫಿಸರರು, ನೌಕರರು ಮತ್ತು ಅವರ ಕ್ಯಾರೇಜುಗಳು, ಗಾಡಿಗಳು ಮತ್ತು ಜಾನವರುಗಳು ಇವುಗಳ ಮೇಲೆ ಮತ್ತು ಅರಮನೆ ಇಲಾಖೆಗೆ ಸೇರಿದ ಗಾಡಿಗಳು, ಕ್ಯಾರೇಜುಗಳು, ಜಾನವರುಗಳು ಇವುಗಳಮೇಲೆ ಸಹಾ.

ನಂಬರು.	ಷೆಡ್ಯೂಲ್ A.	
1	ರೈಲ್ವೆ ಸ್ಟೇಷನ್ ರಸ್ತೆ ...	ಬಳಗುಳದ ರಸ್ತೆ ಮತ್ತು ಸಿಕ್ ಲೈನ್ ರಸ್ತೆ ಇವೆರಡು ಜಂಕ್ಷನ್ ಆಗುವ ಸ್ಥಳದಲ್ಲಿರುವ ಉಕ್ಕಡ
2	ಬಳಗುಳದ ರಸ್ತೆ ..	ಕೆಂಪನಕಟ್ಟೆ ಉಕ್ಕಡ
3	ಶ್ರೀರಂಗಪಟ್ಟಣದ ರಸ್ತೆ ..	ಎರಕಟ್ಟೆ ಡಿಟೋ
4	ಬೆಂಗಳೂರು ರಸ್ತೆ ..	ವೀರನಗೆರೆ ಡಿಟೋ
5	ಸೆಮಿಟೆರಿ ರಸ್ತೆ ..	ಬಂಗ್ಲಿ ಸಂತ್ರಿ ಡಿಟೋ
6	ಮಹದೇವಪುರದ ರಸ್ತೆ ..	ಜಲಪುರಿ ಡಿಟೋ
7	ಆಲನಹಳ್ಳಿ ರಸ್ತೆ ..	ಇಟ್ಟಿಗೆಗೂಡು ಡಿಟೋ
8	ರೇಸುಕೋರ್ಸ್ ರಸ್ತೆ ...	ರೋಣಸಂತ್ರಿ ಡಿಟೋ
9	ನಂಜನಗೂಡು ರಸ್ತೆ ..	ನಂಜನಗೂಡು ಡಿಟೋ
10	ಡಿಟೋ ..	ಹಾಲಿ ಉಕ್ಕಡದಬಳಿ ವಿಧಾಯಕ ಮಾಡಿರುವಂತೆ ನಾಚನಹಳ್ಳಿ ಉಕ್ಕಡ
11	ಮಾನಂದವಾಡಿ ರಸ್ತೆ ...	ಚಟ್ಟನಹಳ್ಳಿ ಉಕ್ಕಡ
12	ವೈಸ್ರಾಯಿ ರಸ್ತೆ ..	ಹೊಲಗೇರಿ ಡಿಟೋ
13.	ಚಾಮರಾಜ ಅಗ್ರಹಾರದ ಹಿಂಭಾಗದ ರಸ್ತೆ ...	ಡಿಟೋ
14	ಜ್ಯಾಬಿಲಿ ರಸ್ತೆ ...	ಕುಕ್ಕನಹಳ್ಳಿ ಡಿಟೋ
15	ಇಲವಾಲದ ರಸ್ತೆ ..	ಶ್ರೀರಾಮಪೇಟೆ ಡಿಟೋ

ನಂಬರು.	ಷೆಡ್ಯೂಲ್ B.	ರೂ. ಆ. ಪೈ.
	ಟೋಲುಗೇಟುಗಳಲ್ಲಿ ವಸೂಲು ಮಾಡತಕ್ಕ ದರಗಳ ತಪಸೀಲು.	
1	ಸ್ಪ್ರಿಂಗು ಇರತಕ್ಕ ಪ್ರತಿ ಬಂದು ನಾಲ್ಕು ಚಕ್ರದ ಕ್ಯಾರೇಜಿಗೆ	0 4 0
2	ಡಿಟೋ 2 ಚಕ್ರದ ಕ್ಯಾರೇಜಿಗೆ	0 2 0
3	ಮನುಷ್ಯರು ಯಾ ಎತ್ತುಗಳು, ಕುದುರೆಗಳು, ಹೇಸರಕತ್ತೆಗಳು ಇವುಗಳಿಂದ ಎಳೆಯಲ್ಪಟ್ಟ ಭರ್ತಿಗಾಡಿಗಳು ಅಥವಾ ಹ್ಯಾಕ್ನಿ ಗಾಡಿ 1ಕ್ಕೆ	0 2 0
4	ಡಿಟೋ ಖಾಲಿ ಇರತಕ್ಕ ಪ್ರತಿ ಬಂದು ಗಾಡಿಗೆ	0 1 0
5	ಡಿಟೋ ಹೇರು ಹೇರಿಕೊಂಡು ಬರತಕ್ಕ ಕೋಣ ಯಾ ಎತ್ತು 1ಕ್ಕೆ ..	0 0 6
6	ಡಿಟೋ ಸವಾರಿ ಅಥವಾ ಹೇರು ಹೇರಿಕೊಂಡು ಬರತಕ್ಕ 13 ಹಿಡಿಗಳಿಗಿಂತಲೂ, ವಿಾರದ ಕುದುರೆ 1ಕ್ಕೆ	0 1 0
7	ಹೇರು ಇಲ್ಲದೆ ಅಥವಾ ಸವಾರಿ ಇಲ್ಲದೆ ಬರತಕ್ಕ ಕುದುರೆ 1ಕ್ಕೆ	0 0 6
8	13 ಹಿಡಿಗಳು ಅಥವಾ ಅದಕ್ಕಿಂತ ಕಮ್ಮಿಯಾಗಿರತಕ್ಕ ಸವಾರಿ ಅಥವಾ ಹೇರು ಇರುವ ಕುದರೆ 1ಕ್ಕೆ	0 0 6
9	ಡಿಟೋ ಆನೆ 1ಕ್ಕೆ	0 8 0
10	ಡಿಟೋ ಒಂಟೆ 1ಕ್ಕೆ	0 1 0

ಕೆ. ಶ್ರೀನಿವಾಸರಾವ್,
ಫೂರ್ ಪ್ರೆಸಿಡೆಂಟ್.